(ಶ್ರೀ ವೀರೇಂದ್ರ ಪಾಟೀಲ್)

ಅದರ ಒಂದು ಪಟ್ಟಿ ಹಾಗೂ ರಸೀದಿಗಳನ್ನು ಕೊಡಬೇಕೆಂದು ಹೇಳಿದ್ದೆವು. ಆ ಪ್ರಕಾರ ಕೆಲವು ಕಡೆಗಳಲ್ಲಿ ಶ್ಯಾನುಭೋಗರೂ ಮತ್ತು ಪಟೇಲರೂ ಕೂಡ ಆ ರೀತಿ ವಸೂಲು ಮಾಡಬೇಕೆಂದು ಹೇಳಿದೆ.

ಶ್ರೀ ವೀರಭದ್ರಪ್ಪ ಈರಪ್ಪ.—ಕೊಪ್ಪಳ ತಾಲ್ಲೂಕಿನಿಂದ ಒಂದು ದೂರು ಬಂದಿದೆ ಮತ್ತು ಆ ವಿಷಯದ ಬಗ್ಗೆ ವಿಚಾರಣೆ ಮಾಡಲಾಗುತ್ತಿದೆ ಎಂದು ಹೇಳಿದ್ದೀರಿ, ಆ ದೂರು ಯಾವ ಊರಿನಿಂದ ಬಂದಿದೆ, ಎಷ್ಟು ದಿವಸಗಳಿಂದ ಅದನ್ನು ವಿಚಾರ ಮಾಡುತ್ತಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ದೂರು ಎಂದು ಬಂದಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಆ ಡೇಟು ಈಗ ನನ್ನ ಹತ್ತಿರ ಇಲ್ಲ. ದೂರು ಬಂದಿದೆ. ಅದನ್ನ ಪೋಲೀಸಿನವರು ತನಿಖೆ ಮಾಡುತ್ತಿದ್ದಾರೆ. ಅವರು ತಪ್ಪಿತಸ್ಥರು ಎಂದು ಕಂಡು ಬಂದರೆ ಅವರನ್ನು ಪ್ರಾಸಿಕ್ಯೂಟ್ ಮಾಡುತ್ತಾರೆ.

ಶ್ರೀ ಎಸ್. ಗೋಪಾಲ ಗೌಡ.—ಕೊಪ್ಪಳ ತಾಲ್ಲೂಕಿನಲ್ಲಿ ಯಾವ ಊರಿನಿಂದ ಯಾರ ವಿರುದ್ಧ ದೂರು ಬಂದಿದೆ ?

ಶ್ರೀ ವೀರೇಂದ್ರ ಪಾಟೀಲ್.—ಗುಡ್ಲಾನೂರು ಮಾಲಿಪಾಟೀಲ ಎಂಬುವರ ಮೇಲೆ ದೂರು ಬಂದಿದೆ.

ಶ್ರೀ ಎಸ್. ಗೋಪಾಲ ಗೌಡ.—ರಕ್ಷಣಾ ನಿಧಿಗೆ ಸಾರ್ವಜನಿಕರಿಂದ ಹಣವನ್ನು ವಸೂಲು ಮಾಡುವಾಗ ಇಂಥಾ ಆಫೀಸರೇ ರಸೀತಿ ಪುಸ್ತಕವನ್ನು ಹೊಂದಿರಬೇಕು, ಇಂಥಾ ಆಫೀಸರೇ ರಸೀತಿಯನ್ನ ಕೊಟ್ಟು ರಕ್ಷಣಾ ನಿಧಿಯನ್ನು ವಸೂಲು ಮಾಡಬೇಕೆಂದು ಕಾನೂನು ಇರುವಾಗ ಯಾರು ಬೇಕಾದರೂ ರಸೀತಿ ಪುಸ್ತಕವನ್ನು ಅಚ್ಚು ಹಾಕಿಸಿಕೊಂಡು ರಕ್ಷಣಾನಿಧಿಗೆ ಹಣವನ್ನು ವಸೂಲು ಮಾಡಬಹುದೇ ?

ಶ್ರೀ ವೀರೇಂದ್ರ ಪಾಟೀಲ್.—ರಸೀತಿ ಪುಸ್ತಕವನ್ನು ಅಚ್ಚು ಹಾಕಿಸಿಕೊಂಡು ಯಾರು ಬೇಕಾದರೂ ರಕ್ಷಣಾ ನಿಧಿಗೆ ಹಣವನ್ನು ವಸೂಲು ಮಾಡಬಹುದು ಎಂದು ನಾನು ಹೇಳಲಿಲ್ಲ.

Vigilance Commissioner's Report

*Q.—97. SRI R. N. LAKSHMIPATHY (Gauribidanur).—

Will the Government be pleased to state :—

(*a*) whether the Vigilance Commissioner of the State has given any report to Government to effectively check corruption, after his visit to foreign countries ;

(*b*) if so, what action Government have taken on his report ?

A.—SRI VEERENDRA PATIL (Minister for Public Works) [on behalf of SRI S. NIJALINGAPPA (Chief Minister)].—

(*a*) Yes.

(*b*) The report is being examined.